ಸ್ವರೂಪ ಹಾಗೂ ಅದರ ಹಿಂದಿರುವ ತಾತ್ವಿಕತೆ ಇವುಗಳನ್ನು ಸಂಕ್ಷಿಪ್ತವಾಗಿ ದಾಖಲಿಸಿ ಈ ಲೇಖನವನ್ನು ಮುಗಿಸಬಹುದು.

1) ಎಲ್.ಎಸ್.ಎಸ್. ಅವರ ಒಟ್ಟಾರೆ ವಿಮರ್ಶನ ಚೌಕಟ್ಟನ್ನು ಬ್ರಿಟಿಷ್ ರೂಪನಿಷ್ಠ ವಿಮರ್ಶೆ ಮತ್ತು ಅಮೆರಿಕನ್ ನವ್ಯ ವಿಮರ್ಶೆ ರೂಪಿಸಿವೆ. ಪರಿಣಾಮತಃ, ಅವರು ಎಲಿಯಟ್–ಲೀವಿಸ್–ರಾನ್ಸಮ್ ಮುಂತಾದವರ 'ಆಬ್ಜೆಕ್ಟಿವ್ ಕಾರಿಲಟಿವ್' (ವಸ್ತುಪ್ರತಿರೂಪ), 'ಆರ್ಗ್ಯಾನಿಕ್ ಯೂನಿಟಿ' (ಸಾವಯವ ಸಂಬಧ), 'ಅಫ಼ರ್ಮೇಶನ್ ಆಫ್ ಲೈಫ್' (ಬದುಕನ್ನು ಗೌರವಿಸುವುದು), ಇತ್ಯಾದಿ ಪರಿಕಲ್ಪನೆಗಳನ್ನು ತಮ್ಮ ಮೌಲ್ಯಮಾಪನೆಯಲ್ಲಿ ಉಪಯೋಗಿಸುತ್ತಾರೆ. ಪಠ್ಯಕೇಂದ್ರಿತವಾದ ಅವರ ವಿಮರ್ಶೆಯಲ್ಲಿ ಅವರು ಕೊಡುವ ತೀರ್ಮಾನಗಳೆಲ್ಲವುಗಳಿಗೂ ಪಠ್ಯಗಳಿಂದ ಆಧಾರವನ್ನು ಕೊಟ್ಟು ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ; ಬೀಸು ಹೇಳಿಕೆಗಳು ಅವರ ವಿಮರ್ಶನ ಪದ್ಧತಿಗೇ ವಿರುದ್ಧವಾದವುಗಳು ಎಂದು ಹೇಳಬಹುದು. ಯಾವುದೇ ಸಾಹಿತ್ಯ ಪ್ರಭೇದವಿರಲಿ, ಅದು ಜೀವಪರವಾಗಿದೆಯೆ ಅಥವಾ ಜೀವ ವಿರೋಧಿಯೆ, ಮತ್ತು ಅದು ಬದುಕನ್ನು ಸಕಾರಾತ್ಮಕವಾಗಿ ಗೌರವಿಸುತ್ತದೆಯೆ ಅಥವಾ ಇಲ್ಲವೆ ಎಂಬುದು ಎಲ್.ಎಸ್.ಎಸ್. ಅವರಿಗೆ ಮೌಲ್ಯಮಾಪನದಲ್ಲಿ ಅತಿ ಮುಖ್ಯವಾಗುತ್ತದೆ.

2) ಅವರಿಗೆ ಸಂಸ್ಕೃತ ಸಾಹಿತ್ಯ ಹಾಗೂ ಕಾವ್ಯಮೀಮಾಂಸೆ ಮತ್ತು ಕನ್ನಡ ಸಾಹಿತ್ಯದಲ್ಲಿ ಪಾಂಡಿತ್ಯವಿದ್ದುದರಿಂದ ಅವರು ನವ್ಯವಿಮರ್ಶೆಯ ಚೌಕಟ್ಟನ್ನು ವಿಸ್ತರಿಸುತ್ತಾರೆ. ಅವರು ಒಂದು ಸಾಹಿತ್ಯ ಕೃತಿಯನ್ನು ಇಡಿಯಾಗಿಯೂ ಅದರ ಭಾಗಗಳನ್ನು ಬಿಡಿಯಾಗಿಯೂ ಸೂಕ್ಷ್ಮವಾಗಿ ಲಕ್ಷಿಸುತ್ತಾರೆ ಮತ್ತು ಅವುಗಳಿಗೆ ಸಂವೇದನಾಶೀಲರಾಗಿ ಸ್ಪಂದಿಸುತ್ತಾರೆ. ಈ ಕಾರಣದಿಂದಲೇ ಅವರ ವಿಮರ್ಶೆಯ ಓದೂ ರೋಚಕ ಅನುಭವವಾಗುತ್ತದೆ.

3) ಯಾವುದೇ ಸಾಹಿತ್ಯ ಪ್ರಭೇದವಿರಲಿ ಅಥವಾ ತಾತ್ವಿಕತೆಯಿರಲಿ, ಹೆಚ್ಚಿನ ಸಂದರ್ಭಗಳಲ್ಲಿ ಅವರು ತೌಲನಿಕ ವಿಮರ್ಶೆಗೆ ಒತ್ತು ಕೊಡುತ್ತಾರೆ; ಮತ್ತು ಆ ಮೂಲಕ ಸಾಹಿತ್ಯ ವಿಮರ್ಶೆಗೆ ಸಾಮಾಜಿಕ–ಸಾಂಸ್ಕೃತಿಕ ಆಯಾಮಗಳನ್ನು ಕಲ್ಪಿಸುತ್ತಾರೆ.

4) ಪಠ್ಯಕೇಂದ್ರಿತ ವಿಮರ್ಶೆಯಲ್ಲಿಯೂ ಅವರು ಓದುಗ/ಪ್ರೇಕ್ಷಕರನ್ನು ಪರಿಗಣಿಸಿ, ಅವರ ಗ್ರಹಿಕೆಗೆ ಹಾಗೂ ಅವರ ಮೇಲಾಗುವ ಅನುಭವಕ್ಕೆ ಮಹತ್ವವನ್ನು ಕೊಡುತ್ತಾರೆ.

ಎಲ್.ಎಸ್.ಎಸ್. ಶ್ರೇಷ್ಠ ಆಧುನಿಕ ವಿಮರ್ಶಕರು. ಹಾಗೆಯೇ, ಅವರು ನಿಘಂಟುಕಾರರೂ ಅಹುದು, ಕತೆಗಾರರೂ ಅಹುದು, ಸಾಹಿತ್ಯಚರಿತ್ರಕಾರರೂ ಅಹುದು. ಈ ಬಗೆಯ ಬಹು ಆಯಾಮಗಳ ವಿದ್ವತ್ತು ಕೆಲವೇ ಕೆಲವು ವ್ಯಕ್ತಿಗಳಲ್ಲಿ ಕ್ವಚಿತ್ತಾಗಿ ಕಂಡು ಬರುತ್ತದೆ; ಅಂತಹ ಅಪರೂಪದ ವ್ಯಕ್ತಿ ಎಲ್.ಎಸ್. ಶೇಷಗಿರಿ ರಾವ್.


**ಸಿ.ಎನ್. ರಾಮಚಂದ್ರನ್**

ಕನ್ನಡದ ಪ್ರಸಿದ್ಧ ವಿಮರ್ಶಕ, ಅನುವಾದಕ, ಕಥೆಗಾರ ಸಿಎನ್‌ಆರ್ ಸುಮಾರು 30 ಕೃತಿಗಳನ್ನು ರಚಿಸಿದ್ದಾರೆ. 'ಶಿಲ್ಪ ವಿನ್ಯಾಸ' ಅವರ ಮೊದಲ ವಿಮರ್ಶಾ ಸಂಕಲನ. 'ಶೋಧ' ಅವರ ಕಾದಂಬರಿಯಾದರೆ, 'ಕಸಾಂದ್ರ' ಅವರ ಕಥಾಸಂಗ್ರಹ. 'ನೆರಳುಗಳ ಬೆನ್ನು ಹತ್ತಿ' ಅವರ ಆತ್ಮಕಥನ. ಕೆ.ಎಸ್. ನರಸಿಂಹಸ್ವಾಮಿ ಅವರ ಸಮಗ್ರ ಸಾಹಿತ್ಯವನ್ನು ಸಂಪಾದಿಸಿದ್ದಾರೆ. ಸಿಎನ್‌ಆರ್ ಅಧ್ಯಾಪಕ ವೃತ್ತಿಯಿಂದ ನಿವೃತ್ತರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.